ಸಾಕ್ಷಿಯ ಹೆಸರುಃ ಎಸ್.ಆರ್. ಸಣ್ಣಪ್ಪಗೌಡ

ದಿನಾಂಕಃ **13-10-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಡಿ.ಎಂ. ವಕೀಲರಿಂದಃ

ನಾನು ಈ ದಾವೆಯಲ್ಲಿ ಅಕ್ರಮವಾಗಿ ಕಟ್ಟಿರುವಂತಹ ಮನೆಯನ್ನು ಕೆಡುವಬೇಕೆಂದು ಪರಿಹಾರ ಕೋರಿರುತ್ತೇನೆ ಎಂದರೆ ಸರಿ. ನಾನು ದಾವೆಯಲ್ಲಿ ನಮೂದಿಸಿದ ದಾವಾ ಷೆಡ್ಯೂಲ್‌ನ ವಿವರಣೆಯಲ್ಲಿ ಅಕ್ರಮವಾಗಿ ಕಟ್ಟಡವನ್ನು ಕಟ್ಟಲಾಗಿದೆ ಎಂದು ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ತಿಳಿಸಿರುತ್ತೇನೆ ಎನ್ನುತ್ತಾರೆ. ಈ ಅಕ್ರಮವಾದ ಕಟ್ಟಡವನ್ನು ಪ್ರತಿವಾದಿ ಕಟ್ಟಿರುತ್ತಾರೆ ಪ್ರತಿವಾದಿ ಈ ಕಟ್ಟಡವನ್ನು ಅಕ್ರಮವಾಗಿ ಅಥವಾ ಸಕ್ರಮವಾಗಿ ಕಟ್ಟಿರುತ್ತಾರೆ ಎಂದು ನಾನು ಪರಿಶೀಲನೆ ಮಾಡಿರುತ್ತೇನೆ. ಪ್ರತಿವಾದಿ ಕಟ್ಟಿರುವ ಕಟ್ಟಡ ಕೃಷ್ಣರಾಜನಗರದ ಪುರಸಭೆ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಈ ಕಟ್ಟಡವನ್ನು ಕಟ್ಟಲು ಪ್ರತಿವಾದಿ ಕೃಷ್ಣರಾಜನಗರದ ಪುರಸಭೆಯಿಂದ ಲೈಸೆನ್ಸ್ ಪಡೆದಿರುತ್ತಾರೋ ಇಲ್ಲವೋ ಎಂದು ಪರಿಶೀಲನೆ ಮಾಡಿರುತ್ತೇನೆ. ಆಗ ನನಗೆ ಪ್ರತಿವಾದಿ ಲೈಸೆನ್ಸ್ ಪಡೆದಿರುತ್ತಾರೋ ಇಲ್ಲವೋ ಎಂದು ಗೊತ್ತಾಗಿರುವುದಿಲ್ಲ. ಪ್ರತಿವಾದಿ ಅಕ್ರಮವಾಗಿ ಕಟ್ಟಡ ಕಟ್ಟಿರುತ್ತಾರೆ ಎಂದು ನಾನು ಕೃಷ್ಣರಾಜನಗರದ ಪುರಸಭೆಗೆ ದೂರು ಸಲ್ಲಿಸಿರುತ್ತೇನೆ.

2) ನನ್ನ ದಾವಾ ಸೈಟ್ ನಂ.128 ಅಸೆಸ್‌ಮೆಂಟ್ ನಂ.7415/128 ಎಂದರೆ ಸರಿ. ಸೈಟ್ ನಂ.16 ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂ.7784 ಎ ಗೆ ನನಗೂ ಯಾವುದೇ ವಿವಾದ, ಹಕ್ಕು, ಹಿತಾಸಕ್ತಿ ಮತ್ತು ಸಂಬಂಧ ಇಲ್ಲ ಎಂದರೆ ಸರಿ. ಸೈಟ್ ನಂ.16 ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂ.7784 ಎ ರಲ್ಲಿನ ಮನೆಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ದಾವಾ ಹಾಕುವ ಮುನ್ನ ಪ್ರತಿವಾದಿ ಕಟ್ಟಿರುವ ಮನೆ ಯಾವ ಸೈಟ್ ನಂಬರ್ ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂಬರಿನಲ್ಲಿ ಬರುತ್ತದೆ ಎಂದು ಪರಿಶೀಲನೆ ಮಾಡಿರುವುದಿಲ್ಲ. ಪ್ರತಿವಾದಿ ಕಟ್ಟಿರುವ ಮನೆ ಯಾವ ಸೈಟ್ ನಂಬರ್ ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂಬರಿನಲ್ಲಿ ಬರುತ್ತದೆ ಎಂದು ಪರಿಶೀಲನೆ ಮಾಡಬೇಕೆಂದು ಪುರಸಭೆಯವರಿಗೆ ದೂರು

ಅರ್ಜಿಯನ್ನು ಕೊಟ್ಟಿರುವುದಿಲ್ಲ. ದಾವ ಸಲ್ಲಿಸುವ ಮುನ್ನ ಪ್ರತಿವಾದಿ ಯಾವ ದಾಖಲೆಗಳ ಆಧಾರದ ಮೇಲೆ ಮನೆ ಕಟ್ಟಿರುತ್ತಾರೆ ಎಂದು ಮತ್ತು ಹಕ್ಕನ್ನು ಹೊಂದಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ ಎಂದರೆ ಸರಿ.

3) ನನ್ನ ವಾದಪತ್ರದ 4 ನೇ ಪ್ಯಾರಾದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗೆ ದಾವಾಸ್ವತ್ತಿನ ಮೇಲೆ ಯಾವುದೇ ಹಕ್ಕು ಹಿತಾಸಕ್ತಿ ಸ್ವಾಧೀನ ಇರುವುದಿಲ್ಲವೆಂದು ನಮೂದಿಸಿದ್ದು, ಅದನ್ನು ನಾನು ಯಾವುದೇ ಆಧಾರವಿಲ್ಲದೇ ನನ್ನ ಸ್ವಂತ ಇಚ್ಚೆಯಿಂದ ಬರೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಉತ್ತರ ದಿಕ್ಕಿನಲ್ಲಿರುವ ನಿವೇಶನ ಸಂಃ 127 ಮರಿಯಪ್ಪನವರಿಗೆ ಸೇರಿದೆ ಹಾಗೂ ದಕ್ಷಿಣ ದಿಕ್ಕಿನಲ್ಲಿರುವ ನಿವೇಶನ ಸಂಃ 129 ಸರೋಜಮ್ಮನವರಿಗೆ ಸೇರಿದೆ. ಸದರಿ ಸರೋಜಮ್ಮನವರು ಇದೇ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿ ಅದನ್ನು ನಡೆಸದೇ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಮೂರು ಫೋಟೋಗಳನ್ನು ತೋರಿಸಿ, ನೀವು ಹೊಡೆದು ಹಾಕಬೇಕು ಎಂದು ಕೇಳಿರುವ ಮನೆ ಇದೆಯೇ ಎಂದು ಕೇಳಿದಾಗ, ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ 3 ಫೋಟೋಗಳನ್ನು ನಿಡಿ**-01** ರಿಂದ ನಿಡಿ**-03** ಹಾಗೂ ಅವುಗಳ ಒಂದು ಸಿಡಿಯನ್ನು ನಿಡಿ**-04** ಎಂದು ಗುರುತಿಸಲಾಯಿತು. ನಾನು ಹಾಜರುಪಡಿಸಿದ ನಿಪಿ-09 ರಿಂದ 14 ರ ಫೋಟೋಗಳು ಹಾಗೂ ನಿಡಿ-01 ರಿಂದ 03 ರಲ್ಲಿರುವ ಮನೆ ಒಂದೇ ಆಗಿರುತ್ತದೆ. ಈ ಫೋಟೋಗಳಲ್ಲಿರುವ ಮನೆ ಪಕ್ಕಾ ಆರ್.ಸಿ.ಸಿ. ಮನೆ ಎಂದರೆ ಸರಿ. ಈ ದಾವೆ ಸಲ್ಲಿಸುವ ಮುನ್ನ ಪುರಸಭೆಯವರು ಈ ಮನೆಗೆ ತೆರಿಗೆಯನ್ನು ನಿಗಧಿಪಡಿಸಿರುತ್ತಾರೋ ಇಲ್ಲವೋ ಎಂದು ನಾನು ತಿಳಿದುಕೊಂಡಿರುವುದಿಲ್ಲ.

4) ಪ್ರತಿವಾದಿ ಈ ಮನೆಯನ್ನು ನಿವೇಶನ ಸಂಖ್ಯೆ 128 ರಲ್ಲಿ ಕಟ್ಟಿರುತ್ತಾರೆಂದು ನಾನು ಪುರಸಭೆಗೆ ದೂರು ಸಲ್ಲಿಸಿರುವುದಿಲ್ಲ. ಪ್ರತಿವಾದಿ ಮನೆ ಕಟ್ಟಿಕೊಂಡು ವಾಸವಾಗಿರುವ ಮನೆಯನ್ನು ನಾನು ಫೋಟೋ ತೆಗೆದುಕೊಂಡು ಇದೇ ಮನೆಯನ್ನು ನಿವೇಶನ ಸಂಖ್ಯೆ 128 ರಲ್ಲಿ ಕಟ್ಟಿರುತ್ತಾರೆಂದು ಭಾವಿಸಿಕೊಂಡು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-09 ರಿಂದ 14 ರಲ್ಲಿರುವ ಮನೆ ನಿವೇಶನ

ಸಂಖ್ಯೆ: 128 ರಲ್ಲಿ ಕಟ್ಟಿ ರುತ್ತಾರೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-09 ರಿಂದ 14 ಹಾಗೂ ನಿಡಿ-01 ರಿಂದ 03 ರಲ್ಲಿರುವ ಮನೆ ಸೈಟ್ ನಂ.16 ಅಸೆಸ್‌ಮೆಂಟ್ ನಂ.7784 ಎ ರಲ್ಲಿರುವ ಮನೆ ಎಂದರೆ ಸರಿಯಲ್ಲ. ಈ ಮನೆಗೆ 2002-03 ರಲ್ಲಿಯೇ ಪುರಸಭೆಯಿಂದ ತೆರಿಗೆ ನಿಗಧಿಪಡಿಸಲಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ಕಟ್ಟಿರುವ ಮನೆ ಯಾವ ಸೈಟ್ ನಂಬರ್ ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂಬರಿನಲ್ಲಿ ಇದೆ ಎಂದು ಪರಿಶೀಲನೆ ಮಾಡದೇ ಇರುವುದರಿಂದ, ನನಗೆ ಅದಕ್ಕೆ ತೆರಿಗೆ ನಿಗಧಿಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

5) ಯಾವುದೇ ವ್ಯಕ್ತಿ ಈ ಫೋಟೋಗಳಲ್ಲಿರುವ ಮನೆಯನ್ನು ಕಟ್ಟಿಸಬೇಕಾದರೆ ಕನಿಷ್ಟ 6 ತಿಂಗಳಿನಿಂದ 1 ವರ್ಷ ಬೇಕಾಗುತ್ತದೆ ಎಂದರೆ ಸರಿ. ಪ್ರತಿವಾದಿ ಈ ಮನೆಯನ್ನು ಕಟ್ಟುವಾಗ ನಾನು ತಡೆಯಲು ಪ್ರಯತ್ನ ಮಾಡಿರುತ್ತೇನೆ. ನಾನು ಪೋಲೀಸರಿಗೆ ಮತ್ತು ಪುರಸಭೆಗೆ ದೂರನ್ನು ನೀಡಿರುತ್ತೇನೆ. ಸದರಿ ದೂರಿನಲ್ಲಿ ನಾನು ಪ್ರತಿವಾದಿ ನಿವೇಶನ ಸಂಖ್ಯೆ: 128 ರಲ್ಲಿ ಮನೆ ಕಟ್ಟುತ್ತಿದ್ದಾರೆಂದು ನಮೂದಿಸಿದ್ದೆ ಎಂದರೆ ಸರಿ. ಆಗ ಪುರಸಭೆ ಹಾಗೂ ಪೋಲೀಸರು ಸ್ಥಳಕ್ಕೆ ಬಂದು ಪ್ರತಿವಾದಿ ನಿವೇಶನ ಸಂಖ್ಯೆ: 128 ರಲ್ಲಿ ಮನೆ ಕಟ್ಟುತ್ತಿದ್ದಾರೋ ಇಲ್ಲವೋ ಎಂದು ಪರಿಶೀಲನೆ ಮಾಡಿದ್ದರು ಎಂದರೆ ಸರಿ. ಪ್ರತಿವಾದಿ ನಿವೇಶನ ಸಂಖ್ಯೆ: 16 ರಲ್ಲಿ ಮನೆ ಕಟ್ಟುತ್ತಿದ್ದಾರೆಂದು ಪರಿಶೀಲಿಸಿ ತಿಳಿದುಕೊಂಡು ನನ್ನ ದೂರಿನ ಮೇಲೆ ಅವರು ಯಾವುದೇ ಕ್ರಮ ಕೈಗೊಳ್ಳದೇ ಮುಕ್ತಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಮತ್ತು ಪುರಸಭೆಗೆ ಸಲ್ಲಿಸಿದ ದೂರು ಅರ್ಜಿಗಳ ಪ್ರತಿಯನ್ನು ಮತ್ತು ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಿವೇಶನ ಸಂಖ್ಯೆ: 16 ರಲ್ಲಿ ಮನೆ ಕಟ್ಟುವಾಗ ಪುರಸಭೆಯಿಂದ ಪರವಾನಗಿ ಪಡೆದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ಸೈಟ್ ನಂ.16 ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂ.7784 ಎ ರಲ್ಲಿ ಮನೆ ಕಟ್ಟಲು ಪುರಸಭೆಯಿಂದ ಅಧಿಕೃತವಾಗಿ ಪರವಾನಗಿ ಪಡೆದು ಮನೆ ಕಟ್ಟಿರುವುದರಿಂದ ನಾನು ದಾವೆಯಲ್ಲಿ ಮತ್ತು ಮುಖ್ಯ

ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಅದು ಅಕ್ರಮ ಮತ್ತು ಅನಧಿಕೃತ ಕಟ್ಟಡ ಅಲ್ಲ ಎಂದರೆ ಸರಿಯಲ್ಲ.

6) ನಾನು ದಾವಾ ಹಾಕುವ ಮುನ್ನ ದಾವಾ ಸೈಟ್ ನಂ .128 ಕ್ಕೆ ಸಂಬಂಧಿಸಿದ ಲೇಔಟ್ ಪ್ಲಾನ್ ಅನ್ನು ಪಡೆದು ಸೈಟ್ ನಂ .128 ಎಲ್ಲಿ ಬರುತ್ತದೆ ಎಂದು ಪರಿಶೀಲನೆ ಮಾಡಿರುತ್ತೇನೆ. ನಾನು ಹಾಜರುಪಡಿಸಿದ ನಿಪಿ-02 ರಲ್ಲಿ ನಿವೇಶನ ಸಂಖ್ಯೆ 128 ಸೌದೆ ಡಿಪೋ ಹತ್ತಿರ ಎಂದು ನಮೂದಿಸಿದೆ ಎಂದರೆ ಸರಿ. ಈ ದಾವೆಯ ಪ್ರಕಾರ ನಿವೇಶನ ಸಂಖ್ಯೆ 128 ಎಲ್ಲಿ ಬರುತ್ತದೆ ಎಂದು ನಿರ್ಧಿಷ್ಟವಾಗಿ ನಮೂದಿಸಿಲ್ಲ ಎಂದರೆ ಸಾಕ್ಷಿ ಚೆಕ್‌ಬಂದಿಯನ್ನು ನಮೂದಿಸಿದೆ ಮತ್ತು ಸೌದೆ ಡಿಪೋ ಹತ್ತಿರ ಇದೆ ಎಂದು ನಮೂದಿಸಿದೆ ಎನ್ನುತ್ತಾರೆ. ಈ ಹಕ್ಕುಪತ್ರದ ಪ್ರಕಾರ ನಿವೇಶನ ಸಂಖ್ಯೆ 128 ಎಲ್ಲಿ ಬರುತ್ತದೆ ಎಂದು ನಿರ್ಧಿಷ್ಟವಾಗಿ ನಿಗಧಿಪಡಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಹಾಕುವ ಮುನ್ನ ನನ್ನ ನಿವೇಶನ ಸಂಖ್ಯೆ 128 ನ್ನು ಬನ್ನಿಮಂಟಪ ಎನ್ನುವುದನ್ನು ಮುಂದೆ ಮಾಡಿ ಸೌದೆ ಡಿಪೋ ಹತ್ತಿರ ಎಂಬುವುದನ್ನು ನಗಣ್ಣೆಮಾಡಿ ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ಅದು ತಪ್ಪು ಎನ್ನುತ್ತಾರೆ. ನಿಪಿ-02 ರಲ್ಲಿರುವ ಸೌದೆ ಡಿಪೋ ಈಗ ಬನ್ನಿಮಂಟಪ ಬಡಾವಣೆಯಾಗಿದೆ ಎಂದು ತೋರಿಸಲು ನಾನು ಪುರಸಭೆಯಿಂದ ಅಥವಾ ಬೇರೆ ಇಲಾಖೆಯಿಂದ ಅಧಿಕೃತ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-02 ರಲ್ಲಿ ನಿವೇಶನ ಸಂಖ್ಯೆ 128 ಪಿ ಎಲ್ ಡಿ ಬ್ಯಾಂಕ್ ರಸ್ತೆಯಲ್ಲಿ ಇದೆ ಎಂದು ನಮೂದಿಸಿಲ್ಲ, ಆದರೆ ನಾನು ದಾವೆ ಸಲ್ಲಿಸುವ ಸಮಯದಲ್ಲಿ ನಿವೇಶನ ಸಂಖ್ಯೆ 128 ಪಿ ಎಲ್ ಡಿ ಬ್ಯಾಂಕ್ ರಸ್ತೆಯಲ್ಲಿ ಇದೆ ಎಂದು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ನಿವೇಶನ ಮಂಜೂರು ಮಾಡಿದಾಗ ಅಲ್ಲಿ ಪಿ ಎಲ್ ಡಿ ಬ್ಯಾಂಕ್ ಇರಲಿಲ್ಲ ಈಗ ನನ್ನ ನಿವೇಶನದ ಹತ್ತಿರ ಇರುವುದರಿಂದ ಬರೆದಿರುತ್ತೇನೆ ಎನ್ನುತ್ತಾರೆ. 1966 ರಿಂದಲೇ ಪಿ ಎಲ್ ಡಿ ಬ್ಯಾಂಕ್ ಕೆ.ಆರ್.ನಗರದಲ್ಲಿ ಅದೇ ಸ್ಥಳದಲ್ಲಿ ಇದೆ ಎಂದರೆ ಸರಿಯಲ್ಲ.

7) ನನ್ನ ನಿವೇಶನ ಸಂಖ್ಯೆ 128 ಪಿ ಎಲ್ ಡಿ ಬ್ಯಾಂಕ್ ರಸ್ತೆಯಲ್ಲಿದ್ದರೆ ಅದೇ ವಾಸ್ತವಾಂಶವನ್ನು ನಿಪಿ-02 ರಲ್ಲಿ ನಮೂದಿಸುತ್ತಿದ್ದು, ಅದು ಇಲ್ಲದ ಕಾರಣ ಅದನ್ನು

ಬರೆದಿಲ್ಲ ಎಂದರೆ ಸಾಕ್ಷಿ ಅದು ನನ್ನ ನಿವೇಶನದ ಮುಖ್ಯ ರಸ್ತೆಯಿಂದ ಸ್ವಲ್ಪ ದೂರದಲ್ಲಿದೆ ಎನ್ನುತ್ತಾರೆ. ಆದ್ದರಿಂದ ದಾವಾ ಷೆಡ್ಯೂಲ್ ನಲ್ಲಿ ನಮೂದಿಸಿದಂತೆ ನನ್ನ ನಿವೇಶನ ಸಂಖ್ಯೆ: 128 ಪಿ ಎಲ್ ಡಿ ಬ್ಯಾಂಕ್ ರಸ್ತೆಯಲ್ಲಿದೆ ಎಂದು ತಿಳಿಸಿರುವುದು ತಪ್ಪು ಎಂದರೆ ಸರಿ. ಅದರಂತೆ ನಿಪಿ-01 ನನ್ನ ಕ್ರಯಪತ್ರದಲ್ಲಿ ನನ್ನ ನಿವೇಶನ ಸಂಖ್ಯೆ:128 ಪಿ ಎಲ್ ಡಿ ಬ್ಯಾಂಕ್ ರಸ್ತೆಯಲ್ಲಿದೆ ಎಂದು ತಿಳಿಸಿರುವುದು ತಪ್ಪು ಎಂದರೆ ಸರಿ. ನನ್ನ ನಿವೇಶನ ಸಂಖ್ಯೆ: 128 ಪಿ ಎಲ್ ಡಿ ಬ್ಯಾಂಕ್‌ನ ಅಡ್ಡ ರಸ್ತೆಯಲ್ಲಿ ಇದೆ ಎಂದು ನಿವೇಶನ ತೆಗೆದುಕೊಂಡ 6-7 ವರ್ಷಗಳ ನಂತರ ಗೊತ್ತಾಗಿರುತ್ತದೆ. ಆ ನಂತರ ನಾನು ನನ್ನ ಕ್ರಯಪತ್ರವನ್ನು ತಿದ್ದುಪಡಿ ಮಾಡಿಸಿಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ನಿವೇಶನ ಸಂಖ್ಯೆ: 128 ನ್ನು ಮಂಜೂರು ಮಾಡುವ ಸಮಯದಲ್ಲಿಯೇ ಅದು ಎಲ್ಲಿ ಬರುತ್ತದೆ ಎಂದು ನಿರ್ಧಿಷ್ಟವಾಗಿ ಗೊತ್ತಿಲ್ಲದೇ ಇದ್ದರೂ ಸಹ ನಮ್ಮ ಕ್ರಯಪತ್ರದಲ್ಲಿ ಚೆಕ್‌ಬಂದಿಯನ್ನು ನಮೂದಿಸಿ ನಿವೇಶನವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-03 ರಂತೆ ನನ್ನ ಹೆಸರಿಗೆ ನಿವೇಶನ ಸಂಖ್ಯೆ: 128 ರ ಖಾತೆ ಆಗಿರುವ ಕುರಿತು ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಪಿ-03 ರಲ್ಲಿ ನನ್ನ ನಿವೇಶನ ಸೌದೆ ಡಿಪೋ ಹತ್ತಿರ ಎಂದು ನಮೂದಿಸಿದ್ದು, ಬನ್ನಿಮಂಟಪ ಎಂದು ನಮೂದಿಸಿಲ್ಲ ಹಾಗೂ ನಿರ್ಧಿಷ್ಟವಾಗಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

8) ನನಗೆ ಈ ನಿವೇಶವನ್ನು ಮಾರಾಟ ಮಾಡಿದ ನಾಗರತ್ನರವರು ಕೆ.ಆರ್.ನಗರದ ಬನ್ನಿಮಂಟಪ ಬಡಾವಣೆಯಲ್ಲಿ ವಾಸವಾಗಿದ್ದರು. ಸದರಿ ನಾಗರತ್ನರವರು ಕೆ.ಆರ್.ನಗರದ ಬನ್ನಿಮಂಟಪ ಬಡಾವಣೆಯಲ್ಲಿ ಯಾವ ಮನೆ ನಂಬರ್ ಹಾಗೂ ಬೀದಿಯಲ್ಲಿ ವಾಸವಾಗಿದ್ದರು ಎಂದು ಹೇಳಲು ಬರುವುದಿಲ್ಲ. ನನಗೆ ಕ್ರಯಕ್ಕೆ ಕೊಟ್ಟಿರುವ ಮಾತನ್ನು ನಂಬಿ ಅವರು ತೋರಿಸಿರುವ ನಿವೇಶನವನ್ನು 128 ಎಂದು ನಂಬಿ ಕ್ರಯಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ . ದಾವಾ ನಿವೇಶನ ಸಂಖ್ಯೆ: 128 ನ್ನು ಕೊಳ್ಳುವ ಮುನ್ನ ನಾನು ನಿಪಿ-02 ರ ಸ್ವಾಧೀನಪತ್ರವನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ ಹಾಗೂ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಹಾಗೂ ನೇರವಾಗಿ ನಿವೇಶನವನ್ನು ನೊಂದಣಿ ಮಾಡಿಸಿಕೊಂಡಿರುತ್ತೇನೆ ಎಂದರೆ ಪುರಸಭೆಯಲ್ಲಿ ರಿಜಿಸ್ಟರ್ ಅನ್ನು ನೋಡಿರುತ್ತೇನೆ

ಎನ್ನುತ್ತಾರೆ. ಈಗಲೂ ಸಹ ಕೆ.ಆರ್.ನಗರದಲ್ಲಿ ಬನ್ನಿಮಂಟಪ ಏರಿಯಾ ಯಾವುದಕ್ಕೆ ಹೇಳುತ್ತಾರೆ ಹಾಗೂ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಈ ನಿವೇಶನವನ್ನು ಕೊಳ್ಳುವ ಮೊದಲು ಪುರಸಭೆಯ ರಿಜಿಸ್ಟರ್ ನಲ್ಲಿ ಸೌದೆ ಡಿಪೋ ಹತ್ತಿರ ಎಂದು ನಮೂದಿಸಿದ್ದು, ಈಗಲೂ ಸಹ ಅದೇ ರೀತಿ ರಿಜಿಸ್ಟರ್ ನಲ್ಲಿ ನಮೂದಿಸಿದ್ದು, ಆದರೆ ಅಸ್ತಿತ್ವದಲ್ಲಿಲ್ಲದ ನಿವೇಶವನವನ್ನು ನಾನು ಕೊಂಡು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ನಿವೇಶನವನ್ನು ಕೊಂಡ ನಂತರ ಖಾತೆ ಬದಲಾವಣೆ ಮಾಡಿಕೊಂಡ ನಂತರ ಪುರಸಭೆಯವರಿಗೆ ಅರ್ಜಿ ಸಲ್ಲಿಸಿ, ನಿವೇಶನ ಸಂಖ್ಯೆ 128 ಎಲ್ಲಿ ಬರುತ್ತದೆ ಎಂದು ನಿಗಧಿಪಡಿಸಲು ಅರ್ಜಿ ಸಲ್ಲಿಸಿರುತ್ತೇನೆ. ನನ್ನ ಅರ್ಜಿಗೆ ಪುರಸಭೆಯ ಸರ್ವೇಯರ್ ಬಂದು ವರದಿ ಸಲ್ಲಿಸಿರುತ್ತಾರೆ ಆದರೆ ನಿವೇಶನವನ್ನು ತೋರಿಸಿರುವುದಿಲ್ಲ.

9) ಪ್ರತಿವಾದಿ ಮನೆ ಕಟ್ಟಿರುವ ಜಾಗವೇ ನನ್ನ ನಿವೇಶನ ಸಂಖ್ಯೆ 128 ಪುರಸಭೆಯ ಅಧಿಕಾರಿಗಳು ವರದಿಯನ್ನು ನೀಡಿರುವುದಿಲ್ಲ. ನಾನು ವಾದಪತ್ರದಲ್ಲಿ ತಿಳಿಸಿರುವಂತೆ ಬನ್ನಿಮಂಟಪ ಬಡಾವಣೆಯಲ್ಲಿ ನಾಗರತ್ನ ಕೋಂ ವಿಜಯ್ ಕುಮಾರ್ ರವರು ನಿವೇಶನ ಸಂಖ್ಯೆ 128 ನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ನಾಗರತ್ನರವರಿಗೆ ನೀಡಿದ ಸ್ವಾಧೀನ ಪತ್ರದ ಪ್ರಕಾರ ನಿವೇಶನ ಬನ್ನಿಮಂಟಪ ಬಡಾವಣೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಹೇಳುವ ಜಾಗಕ್ಕೂ ಹಾಗೂ ನಿಪಿ-02 ರಿಂದ 6 ರಲ್ಲಿರುವ ಜಾಗಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಾಲದಿಂದ ಕಾಲಕ್ಕೆ ಸ್ಥಳದ ಬದಲಾವಣೆ ಮಾಡಿದ ಬಗ್ಗೆ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಕ್ರಯಪತ್ರದಡಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಮಾಲೀಕತ್ವ ಮತ್ತು ಸ್ವಾಧೀನವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಈ ನಿವೇಶನ ಮಾರಾಟ ಮಾಡಿದ ನಾಗರತ್ನರವರಿಗೂ ಕೂಡ ನಿಪಿ-02 ರ ಸ್ವಾಧೀನಪತ್ರದಡಿ ಯಾವುದೇ ಸ್ವಾಧೀನವನ್ನು ಪಡೆದಿರಲಿಲ್ಲ ಎಂದರೆ ಸರಿಯಲ್ಲ.

10) 2004-05 ರಿಂದ 2007-08 ರವರೆಗೆ ನಿವೇಶನದ ಬಗ್ಗೆ ನಿಪಿ-07 ಕಂದಾಯ ರಶೀದಿಯನ್ನು ಹೊರತುಪಡಿಸಿ, ಇತ್ತೀಚೆಗೆ ಈ ಸ್ವತ್ತಿಗೆ ಕಟ್ಟಿದ ಕಂದಾಯ

ರಶೀದಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ನನ್ನ ತಮ್ಮ ಅಶ್ವಥ್ ರವರು ಅಸಲು ದಾವಾ ಸಂಖ್ಯೆ:56/2018 ರಂತೆ ಪ್ರತಿವಾದಿ ಕಟ್ಟಿರುವ ನಿವೇಶನ ಮತ್ತು ಮನೆಯನ್ನು ಪಶ್ನಿಸಿ ಹಾಗೂ ಹೊಡೆಯಬೇಕೆಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಕಟ್ಟಿಸಿರುವ ಮನೆಯ ಜಾಗವನ್ನು ಪ್ರಶ್ನಿಸಿ ಇದೇ ನ್ಯಾಯಾಲಯದಲ್ಲಿ ಸರೋಜಮ್ಮ, ಪಾರ್ವತಮ್ಮ ಉಃ ಸಣ್ಣತಾಯಮ್ಮ ಅಸಲು ದಾವಾ ಸಂಖ್ಯೆ:44/2018 ಮತ್ತು ಅಸಲು ದಾವಾ ಸಂಖ್ಯೆ:54/2018 ರಂತೆ ದಾವೆ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-09 ರಿಂದ 14 ರಲ್ಲಿರುವ ಮನೆ 40x30 ಅಡಿ ಅಳತೆಯ ನಿವೇಶನದಲ್ಲಿ ಕಟ್ಟಿರುವ ಮನೆ ಎಂದರೆ ಸರಿ. ಪ್ರತಿವಾದಿ ಕಟ್ಟಿರುವ ಮನೆ 40x30 ಅಡಿ ಅಳೆಯಲ್ಲಿ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನು ಅಳತೆ ಮಾಡಿಲ್ಲ ಎನ್ನುತ್ತಾರೆ. ನಿಪಿ-09 ರಿಂದ 14 ರಲ್ಲಿರುವ ಮನೆಯನ್ನು ಪ್ರತಿವಾದಿ ಪೂರ್ವ-ಪಶ್ಚಿಮವಾಗಿ 40 ಮತ್ತು ದಕ್ಷಿಣೋತ್ತರವಾಗಿ 30 ಅಡಿ ಯಲ್ಲಿ ಕಟ್ಟಿರುತ್ತಾರೆ.

11) ಇದೇ ಫೋಟೋಗಳಲ್ಲಿರುವ ಮನೆಯನ್ನು ನಾನು ನಿವೇಶನ ಸಂಖ್ಯೆ: 128 ಎಂದು ಹೇಳುತ್ತಿದ್ದೇನೆ ಹಾಗೂ ನನ್ನ ತಮ್ಮ ಅಸಲು ದಾವಾ ಸಂಖ್ಯೆ:56/2018 ರಲ್ಲಿ ಇದೇ ಮನೆಯನ್ನು ನಿವೇಶನ ಸಂಖ್ಯೆ: 126 ಎಂದು ಹೇಳುತ್ತಿದ್ದಾರೆ ಎಂದರೆ ಸಾಕ್ಷಿ ನಾನು ನನ್ನ ನಿವೇಶನದ ಬಗ್ಗೆ ದಾವೆ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ಈ ದಾವೆ ದಾಖಲು ಮಾಡುವ ಮುನ್ನ ನಿವೇಶನ ಮಾರಾಟ ಮಾಡಿರುವ ನಾಗರತ್ನರವರನ್ನು ಭೇಟಿ ಮಾಡಿ ನಿವೇಶನ ಗುರುತಿಸುವ ಬಗ್ಗೆ ಗೊಂದಲ ಉಂಟಾಗಿದೆ ಎಂದು ನಿವೇಶನ ಸಂಖ್ಯೆ: 128 ಎಲ್ಲಿ ಬರುತ್ತದೆ ಎಂದು ತೋರಿಸಿ ಎಂದು ಕೇಳಿರುತ್ತೇನೆ. ಆಗ ನಾಗರತ್ನ ರವರು ಪ್ರತಿವಾದಿ ಕಟ್ಟಿರುವ ಮನೆಯ ಜಾಗವನ್ನು ತೋರಿಸಿರುತ್ತಾರೆ. ಪ್ರತಿವಾದಿ ತಾವು ಕೊಂಡ ನಿವೇಶನ ಸಂಖ್ಯೆ: 16 ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂ.7784 ಎ ರಲ್ಲಿ ಕಾನೂನುಬದ್ಧವಾಗಿ ಮನೆಯನ್ನು ಕಟ್ಟಿಸಿಕೊಂಡು ವಾಸವಾಗಿದ್ದರಿಂದ ನಾನು ಸದರಿ ಸ್ವತ್ತನ್ನು ಕೆಡವಲು ಹಕ್ಕು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

12) ನಿಪಿ-05ರ ಪೂರ್ವ ದಿಕ್ಕಿಗೆ ಅರಣ್ಯ ಇಲಾಖೆಯ ಸೌದೆ ಡಿಪೋ ಇದೆ ಎಂದು ನಮೂದಿಸಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮೊದಲು ಸೌದೆ ಡಿಪೋ ಇದ್ದು, ಈಗ ಬದಲಾವಣೆಯಾಗಿ ಬನ್ನಿಮಂಟಪ ಬಡಾವಣೆಯಾಗಿದೆ ಎನ್ನುತ್ತಾರೆ. ಆದ್ದರಿಂದ ನಿಪಿ-05ರಲ್ಲಿರುವ ಚೆಕ್‌ಬಂದಿ ಸರಿ ಇದೆ. ಪ್ರತಿವಾದಿ ಕಟ್ಟಿರುವ ಮನೆಯ ಪೂರ್ವ ದಿಕ್ಕಿಗೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಕಟ್ಟಿರುವ ಮನೆ ಇಂದಿಗೆ ಸುಮಾರು 30 ಲಕ್ಷ ಬೆಲೆ ಬಾಳುತ್ತದೆ ಎಂದರೆ ಇರಬಹುದು. ನಾನು ಹಾಜರುಪಡಿಸಿದ ನಿಪಿ-01 ರಿಂದ 15 ರ ಪ್ರಕಾರ ನನಗೆ ದಾವಾಸ್ವತ್ತಿನ ಮೇಲೆ ಯಾವುದೇ ರೀತಿ ಹಕ್ಕು, ಹಿತಾಸಕ್ತಿ ಮತ್ತು ಸ್ವಾಧೀನ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನಗೆ ಮಾರಾಟ ಮಾಡಿದ ನಾಗರತ್ನ ರವರಿಗೂ ಕೂಡ ದಾವಾಸ್ವತ್ತಿನ ಮೇಲೆ ಯಾವುದೇ ರೀತಿ ಹಕ್ಕು, ಹಿತಾಸಕ್ತಿ ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಅವರು ಕಟ್ಟಿರುವ ಮನೆಯ ಮೇಲೆ ಯಾವುದೇ ರೀತಿ ಹಕ್ಕು, ಹಿತಾಸಕ್ತಿ ಮತ್ತು ಸ್ವಾಧೀನ ಇರುವುದಿಲ್ಲ ಎಂದು ಹೇಳಿದ್ದು, ಆದರೆ ನಾನು ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡದೇ ಈ ರೀತಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-01 ರಿಂದ 7ರ ದಾಖಲೆಗಳನ್ನು ಇಲ್ಲದ ನಿವೇಶನಕ್ಕೆ ಸೃಷ್ಟಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಫೋಟೋಗಳು ಮತ್ತು ಸಿಡಿ ಸೈಟ್ ನಂ.16 ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂ.7784ಎ ಗೆ ಸಂಬಂಧಿಸಿವೆ ಎಂದರೆ ಸರಿಯಲ್ಲ. ಪ್ರತಿವಾದಿ ಸೈಟ್ ನಂ.16 ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂ.7784ಎ ರಲ್ಲಿ ಕಟ್ಟಿರುವ ಮನೆಯನ್ನು ಅಪಾರ್ಥ ಮಾಡಿಕೊಂಡು ದಾಖಲೆಗಳನ್ನು ಪರಿಶೀಲನೆ ಮಾಡದೇ ನಾನು ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವೆ ದಾಖಲು ಮಾಡುವಾಗ ಸರಿಯಾಗಿ ಮೌಲ್ಯ ಮಾಡಿರುವುದಿಲ್ಲ ಹಾಗೂ ಸರಿಯಾದ ನ್ಯಾಯಾಲಯದ ಶುಲ್ಕವನ್ನು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನಗೆ ದಾವಾಸ್ವತ್ತನ್ನು ಮಾರಾಟ ಮಾಡಿದ ನಾಗರತ್ನ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

13) ಪ್ರತಿವಾದಿ ಕಟ್ಟಿರುವ ಮನೆಗೆ ವಿಧ್ಯುತ್‌ಶ್ಚಕ್ತಿ ಸಂಪರ್ಕ ಮತ್ತು ನೀರಿನ ಸಂಪರ್ಕ ಇದೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.